## ಆರೋಗ್ಯಕರ ಬದಲಾವಣೆ ಅಗತ್ಯ

‘ಮೊಬೈಲ್ ಕಬಂಧ; ದೂರವಿರಲಿ ಕಂದ’ (ಡಿ. 12, ಸುಮಲತಾ ಎನ್.) ಲೇಖನ ಬಹಳಷ್ಟು ಮಾಹಿತಿಗಳನ್ನು ಒಳಗೊಂಡಿದೆ. ಮಕ್ಕಳು ಮೊಬೈಲ್ ಬಳಸುವುದರಿಂದ ಆಗುತ್ತಿರುವ ಪರಿಣಾಮಗಳ ಬಗ್ಗೆ ಮನೆಮಂದಿಯೆಲ್ಲ ಓದಿ ತಿಳಿದು ಮಕ್ಕಳ ಭವಿಷ್ಯಕ್ಕೆ ಆರೋಗ್ಯಕರ ಬದಲಾವಣೆ ತರುವುದು ಅಗತ್ಯ. ಮಕ್ಕಳ ಆರೋಗ್ಯ ಹಾಳು ಮಾಡುವ ಈ ಮಾರ್ಗ ಸರಿ ಇಲ್ಲವೆನ್ನುವ ಸಲಹೆ ಯೋಗ್ಯ. ಕನಿಷ್ಠ 16 ವರ್ಷದ ತನಕವಾದರೂ ಪುಸ್ತಕ, ಪತ್ರಿಕೆಯಿಂದ ಮಾಹಿತಿ ಸಂಗ್ರಹಿಸುವುದನ್ನು ಮಕ್ಕಳು ಅಭ್ಯಾಸ ಮಾಡಿಕೊಳ್ಳಲಿ. ಈಗಂತೂ ಪ್ರಾಥಮಿಕ ಶಾಲೆಯಲ್ಲೂ ತರಗತಿಯಲ್ಲಿ ಪಾಠ ಹೇಳದೆ, ಯೂಟ್ಯೂಬ್ ಲಿಂಕ್ ಕಳುಹಿಸುತ್ತಿದ್ದಾರೆ. 3, 4ನೇ ತರಗತಿ ಮಕ್ಕಳಿಗೂ ಮೊಬೈಲ್ ಪಾಠ! ಬಳಕೆಗೆ ವಯೋಮಿತಿ ಕಡ್ಡಾಯ ಮಾಡಿದ್ದಾರೆ. (ಎಷ್ಟರಮಟ್ಟಿಗೆ ಅನುಷ್ಠಾನ ಗೊತ್ತಿಲ್ಲ). ಆಸ್ಟ್ರೇಲಿಯಾದಲ್ಲಿ ಯಾವುದೇ ರೀತಿಯ ಸ್ಕ್ರೀನ್ ಟೈಂ ಕೊಡಬಾರದೆನ್ನುವ ಕಾನೂನು ಮಾಡಲು ಹೊರಟಿದ್ದಾರೆ. ಭಾರತ ಸರ್ಕಾರವೂ ಎಚ್ಚೆತ್ತುಕೊಳ್ಳದಿದ್ದರೆ ಯುವಜನಾಂಗದ ಭವಿಷ್ಯ ಮಂಕಾಗುವ ದಿನಗಳು ಬರಬಹುದು.

—ಎಲ್. ಗಿರಿಜಾ ರಾಜ್, ಬೆಂಗಳೂರು

## ಸಕಾಲಿಕ

ಮೊಬೈಲು: ಐಲುಪೈಲು!
ಆ ‘ಕ–ಬಂಧ’ನಿಂದಾಗುವ ಅನಾಹುತಗಳ
ಅನೂನ ಅನಾವರಣ. ಸಕಾಲಿಕ ಲೇಖನ.

—ಸಿಪಿಕೆ, ಮೈಸೂರು

## ಪೋಷಕರಿಗೆ ಎಚ್ಚರಿಕೆ ಗಂಟೆ

ಮೊಬೈಲ್ ಬಳಕೆ ಪರಿಣಾಮಗಳ ಕುರಿತು ಗಂಭೀರವಾಗಿ ಚಿಂತಿಸಿ ತಮ್ಮ ಮಕ್ಕಳ ಭವಿಷ್ಯ ಬಾಡಿ ಹೋಗದ ಹಾಗೆ ರಕ್ಷಣೆ ಮಾಡಿಕೊಳ್ಳಬೇಕಿದೆ ತಾಯ್ತಂದೆಯರು. ಸ್ವೀಡನ್, ಅಮೆರಿಕದಲ್ಲಿ ಈಗಾಗಲೇ ಮೊಬೈಲ್ ಕೆಲವು ದೇಶಗಳಂತೆ ಇಲ್ಲಿಯೂ ಮೊಬೈಲ್ ಬಳಕೆಗೆ ವಯಸ್ಸಿನ ಮಿತಿ ಕಡ್ಡಾಯ ಮಾಡಲಿ.

—ವಿ.ಕೆ. ವಾಲ್ವಾಡಿ, ಮೂಡುಬಿದಿರೆ




## ಅಝುರಬೈಜಾನ್ ಅನಾವರಣ

‘ಮಿಶ್ರ ಸಂಸ್ಕೃತಿಯ ಅಝುರಬೈಜಾನ್’ (ಡಿ. 12, ರಹಮತ್ ತರೀಕೆರೆ) ಪ್ರವಾಸ ಕಥನ ಸೊಗಸಾಗಿದೆ. ಅಲ್ಲಿನ ಸಂಸ್ಕೃತಿಯನ್ನು ಬಹಳ ಚೆನ್ನಾಗಿ ಓದುಗರ ಮುಂದಿಟ್ಟಿದ್ದಾರೆ. ರಹಮತ್ ಅವರ ಯಾವುದೇ ಪ್ರವಾಸ ಕಥನಗಳು ನನಗೆ ತುಂಬಾ ಅಚ್ಚುಮೆಚ್ಚು.

—ಬಚ್ಚೇಗೌಡ



## ಆಸಕ್ತಿಕರ ಕಥನ

ರಹಮತ್ ತರೀಕೆರೆ ಅವರ ಎಲ್ಲಾ ಪ್ರವಾಸ ಕಥನಗಳೂ ಬಹಳ ಆಸಕ್ತಿ ಮೂಡಿಸುತ್ತವೆ. ಅಝುರಬೈಜಾನಿನ ರಾಜಕೀಯ ಸ್ಥಿತಿ, ಜನಜೀವನ, ಸಂಸ್ಕೃತಿಯನ್ನು ಅಚ್ಚುಕಟ್ಟಾಗಿ ಬಿಂಬಿಸಿದ್ದಾರೆ.

—ದತ್ತಾತ್ರೇಯ

## ಜಾತ್ಯತೀತ್ಯತೆ ಪಾಠ

ಅಝುರಬೈಜಾನ್‌ನಲ್ಲಿ ಜಾತ್ಯತೀತ್ಯತೆ ಇರುವುದನ್ನು ಲೇಖನದಿಂದ ತಿಳಿದು ಸಂತೋಷವಾಯಿತು. ‘ಸರ್ವೇಃ ಜನಃ ಸುಖಿನೋ ಭವಂತು’ ಎಂಬುದನ್ನು ಇತರೆ ದೇಶಗಳು ಅಝುರಬೈಜಾನ್‌ನಿಂದ ಕಲಿಯಲಿ.

—ಜ್ಯೋತಿ ಉಮೇಶ್, ಬೆಂಗಳೂರು

ಅಝುರಬೈಜಾನ್ ದೇಶದಲ್ಲಿನ ಪ್ರತಿಯೊಂದು ಮಾಹಿತಿಯನ್ನು ತುಂಬಾ ಸೊಗಸಾಗಿ ನಿರೂಪಿಸಿದ್ದಾರೆ.

—ಸತೀಶ್ ಬಾಬು

## ಸ್ಫೂರ್ತಿದಾಯಕ ಯೋಜನೆ

‘ಊರಿಗೆ ಉಪಕಾರಿ ಶೌರ್ಯದ ಮಾದರಿ’ (ಡಿ. 12, ಕೋಡಿಬೆಟ್ಟು ರಾಜಲಕ್ಷ್ಮಿ) ಚೆನ್ನಾಗಿದೆ. ಸಮಾಜ ಸೇವೆಯ ಮನಸ್ಸುಳ್ಳ ಸದೃಢ ಯುವಜನರ ತಂಡ ಕಟ್ಟುವ ಪರಿಕಲ್ಪನೆ ಉತ್ಕೃಷ್ಟವಾಗಿದೆ. ಈ ಲೇಖನ ಓದಿದಾಗ ನನಗೆ ಅಶ್ವತ್ಥರವರು ಊರಿನ ಯುವಕ, ಯುವತಿಯರು ತಮ್ಮ ಶ್ರಮದಾನದಿಂದ ರಸ್ತೆ ನಿರ್ಮಿಸುವ ಕುರಿತು ಹಲವು ದಶಕಗಳ ಹಿಂದೆ ರಚಿಸಿದ್ದ ‘ಹಂಬಲ’ ಕಾದಂಬರಿ ನೆನಪಾಯಿತು.

—ಎಚ್.ಎಸ್. ಶ್ರೀಮತಿ, ಬೆಂಗಳೂರು

## ಪರಿಕಲ್ಪನೆಯೇ ಅದ್ಭುತ

ಪ್ರಾಕೃತಿಕ ವಿಕೋಪಗಳಲ್ಲಿ ಜನರಿಗೆ ನೆರವಾಗಲು ಸ್ಥಳೀಯರ ‘ಶೌರ್ಯ’ ತಂಡ ಕಟ್ಟುವ ಪರಿಕಲ್ಪನೆಯೇ ಅದ್ಭುತ! ವಿವಿಧ ಕೌಶಲಗಳಿರುವ ಜನರು ಒಟ್ಟಾಗಿ ಜನರಿಗೆ ನೆರವಾಗುತ್ತಿರುವುದು ಪ್ರಶಂಸನೀಯ. ಶೌರ್ಯದಂಥ ತಂಡ ಊರಿಗೊಂದರಂತೆ ಇರಲಿ.

—ಶೋಭಾ ಸಂಪತ್, ಬೆಂಗಳೂರು

## ಹೀಗೊಂದು ಮೀಸೆ ಮೀಮಾಂಸೆ

‘ಮೀಸೆ ಮೋಹ’ (ಡಿ. 12, ಮಣ್ಣೆ ರಾಜು) ಬರಹದಲ್ಲಿ ಹೇಳಿದಂತೆ, ಒಂದು ಕಾಲದಲ್ಲಿ ಮೀಸೆ ಇದ್ದರೇ ಗಂಡಿಗೆ ಗೌರವ. ಬಹುಮುಖ್ಯವಾಗಿ ಮೀಸೆ ಪುರುಷತ್ವದ ಸಂಕೇತವಾಗಿತ್ತು. ಆದರೆ ಇದಕ್ಕೆ ವಿರೋಧಾಭಾಸವೂ ಇದೆ. ಹಳೆಯ ಸಿನಿಮಾಗಳಲ್ಲಿ, ಧಾರಾವಾಹಿಗಳಲ್ಲಿ, ಪುಸ್ತಕಗಳಲ್ಲಿ ಪ್ರಕಟಿಸಿದಂತೆ ದೇವತೆಗಳಿಗೆ ಮೀಸೆಯೇ ಇರುವುದಿಲ್ಲ. ಅಷ್ಟ ದಿಕ್ಪಾಲಕರಲ್ಲಿ ಯಮನನ್ನು ಹೊರತುಪಡಿಸಿ ಉಳಿದವರಿಗೆ ಮೀಸೆ ಇಲ್ಲ. ಹಾಗಾಗಿ ಮೀಸೆ ಇದ್ದವರೆಲ್ಲ ಪುರುಷ ಸಿಂಹರಲ್ಲ. ಏನಂತೀರೀ?

—ವಿಜಯ್ ಮಂಜುನಾಥ್

## ನೈಜ ಕಥನ

‘ಯಾರು ಹೊಣೆ’ (ಡಿ. 05, ಲತಾ ಹೆಗಡೆ) ಬಹಳ ಚೆನ್ನಾಗಿದೆ. ನಿಜ ಜೀವನದಲ್ಲೂ ಬಹಳಷ್ಟು ಸಲ ಈ ತರಹ ಘಟನೆಗಳು ನಡೆಯುತ್ತವೆ. ಅಂತ್ಯ ಬಹಳ ಸಂಕಟವಾಯಿತು.

—ಉಷಾ ರಾಜಾರಾವ್

## ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ

‘ಡೈನೊಸಾರ್ ಅವಸಾನದ ಕಥೆ’ (ಡಿ. 12, ಡಾ. ಎನ್.ಬಿ. ಶ್ರೀಧರ್) ಲೇಖನವು 8ನೇ ತರಗತಿಯ ವಿಜ್ಞಾನ ವಿಷಯದ ‘ಅಳಿದು ಹೋದ ಪ್ರಭೇದಗಳು’ ಕುರಿತ ಬೋಧನಾ ಕಲಿಕಾ ಪ್ರಕ್ರಿಯೆಗೆ ಉಪಯುಕ್ತ ಮಾಹಿತಿಗಳನ್ನು ಒದಗಿಸಿತು. ಈ ವಿಷಯದ ಕುರಿತು ವಿದ್ಯಾರ್ಥಿಗಳು ನಿಯೋಜಿತ ಕಾರ್ಯ ತಯಾರಿಸಲು ‘ಸುಧಾ’ ಪತ್ರಿಕೆಯ ಈ ಮಾಹಿತಿ ಪಡೆದು ಕೊಳ್ಳಲು ಸಲಹೆ ನೀಡಿದ್ದೆ. ಮಕ್ಕಳು ಉತ್ತಮ ನಿಯೋಜಿತ ಕಾರ್ಯ ಮಾಡಿದ್ದಾರೆ. ‘ಸುಧಾ’ ಜ್ಞಾನ ಬಿತ್ತನೆಗೆ ಉಪಯುಕ್ತ.

—ಶೇಖರಯ್ಯ ಟಿ.ಎಚ್.ಎಂ., ವಿಜಯನಗರ



## ವಿದ್ಯಮಾನಗಳ ತಿಳಿವಳಿಕೆ

ಲೇಖನ ಚೆನ್ನಾಗಿದೆ. ಈ ಹಿಂದೆ ಗತಿಸಿ ಹೋದ ನಮ್ಮ ಭೂಮಿಯ ವಿದ್ಯಮಾನಗಳ ಬಗ್ಗೆ ನಮಗೆ ತಿಳಿವಳಿಕೆ ಮೂಡಿಸಿದೆ.

—ಉಷಾ ಸೋಗಲ್, ತುರಹಳ್ಳಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in